ಹತ್ತಿರ, ನಿನ್ನೆ ದಿವಸ ಪ್ರಾರ್ಥನೆ ಮಾಡಿದ್ದೇನೆ. ದಯವಿಟ್ಟು ಇ.ಎ.ಎಸ್. ಮತ್ತು ಜೆ.ಆರ್.ವೈ.ನಲ್ಲಿ ಹೆಚ್ಚು ಹಣ ಒದಗಿಸಿ ಎಂದು ಕೇಳಿದ್ದೇನೆ. ಅವರು ಹಣ ಒದಗಿಸಿದಾಗ, ಬೃಹದಾಕಾರದಲ್ಲಿರತಕ್ಕಂತ ಈ ಸಮಸ್ಯೆಗಳು ಕಡಿಮೆಯಾಗುತ್ತದೆ.

ಶ್ರೀ ಎಂ.ಪಿ.ಪ್ರಕಾಶ್:- ಅವರಿಗೆ ಸಹಾಯವಾಗಲಿ ಎನ್ನುವುದಕ್ಕೆ, ನಮ್ಮ ಜಿಲ್ಲೆಯಲ್ಲೂ ಕೂಡ ಶೇಕಡ 80 ಜೆ.ಆರ್.ವೈ. ಅನುದಾನದಲ್ಲಿ, 20 ಸಾವಿರ ರೂಪಾಯಿ ಗ್ರಾಮ ಪಂಚಾಯಿತಿಯ ಮೂಲಕವಾಗಿ ಕೊಡತಕ್ಕಂತಾದ್ದು, ಶೇಕಡ 20ರ ಅನುದಾನದಲ್ಲಿ ಜಿಲ್ಲಾ ಪಂಚಾಯಿತಿಯವರು 20 ಸಾವಿರ, 40 ಸಾವಿರ ರೂಪಾಯಿ ಶಿಕ್ಷಣ ಇಲಾಖೆಯವರಿಗೆ ಕೊಡುತ್ತಿದ್ದೇವೆ. ಒಟ್ಟು 80-85 ಸಾವಿರ ರೂಪಾಯಿಗಳಿಗೆ ಆರ್.ಸಿ.ಸಿ. ಕಟ್ಟಡಕ್ಕೇ ವ್ಯವಸ್ಥೆ ಮಾಡಿದ್ದೇವೆ. ಆ ತರಹದಲ್ಲಿಯೂ ಕೂಡ ತಮ್ಮ ಕ್ಷೇತ್ರದಲ್ಲಿ ತಾವು ವ್ಯವಸ್ಥೆ ಮಾಡಬಹುದು.

ವಿಷಯ:- ರಾಜ್ಯದಲ್ಲಿ ವನ ನಿರ್ಮಾಣ ಕಾರ್ಯಕ್ರಮ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 124 (1106)

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ):- ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?.

ಅ) ರಾಜ್ಯದಲ್ಲಿ ಅರಣ್ಯ ಬೆಳೆಸಲು ಸರ್ಕಾರದವರು ಇದುವರೆವಿಗೆ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವರು?

ಆ) ಈಗ ರಾಜ್ಯದಲ್ಲಿ ಎಷ್ಟು ಎಕರೆ ಅರಣ್ಯ ಪ್ರದೇಶವಿದೆ ಮತ್ತು ಹೊಸದಾಗಿ ಎಷ್ಟು ಎಕರೆ ಅರಣ್ಯ ಬೆಳೆಯಲು ಉದ್ದೇಶಿಸಲಾಗಿದೆ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು):-

ಅ) ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ ರಾಜ್ಯದ ಸರ್ಕಾರಿ : ಸಾರ್ವಜನಿಕ ಹಾಗೂ ಸಮುದಾಯ ಭೂಮಿಗಳಲ್ಲಿ ನೆಡುತೋಪುಗಳನ್ನು ಬೆಳೆಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1. ಸಾಗರೋತ್ತರ ಅಭಿವೃದ್ಧಿ ಆಡಳಿತದ ನೆರವಿನ ಪಶ್ಚಿಮಘಟ್ಟ ಅರಣ್ಯೀಕರಣ ಮತ್ತು ಪರಿಸರ ಯೋಜನೆ.
2. ಪ್ರದೇಶಾಧಾರಿತ ಉರುವಲು ಮತ್ತು ಮೇವು ಯೋಜನೆ.
3. ಸಾಮಾಜಿಕ ಅರಣ್ಯ ಯೋಜನೆ. (ರಾಜ್ಯ ವಲಯ)
4. ಕ್ಷೀಣಿತ ಅರಣ್ಯ ಅಭಿವೃದ್ಧಿ ಯೋಜನೆ.
5. ನಗರ ಪ್ರದೇಶಗಳ ಹಸರೀಕರಣ ಯೋಜನೆ.

6. ರಸ್ತೆ ಬದಿ ನೆಡುತೋಪುಗಳ ಯೋಜನೆ.

7. ಉರುವಲು ಮತ್ತು ಮೇವು ಯೋಜನೆ.

8. ಸಮಗ್ರ ಬಂಜರು ಭೂಮಿ ಅಭಿವೃದ್ಧಿ ಯೋಜನೆ.

9. ಸಾಮಾಜಿಕ ಅರಣ್ಯ ಯೋಜನೆ (ಜಿಲ್ಲಾ ವಲಯ)

10. ಭೂಸಾರ ಸಂರಕ್ಷಣ (ಅರಣ್ಯೀಕರಣ)

11. ನದಿ ಕಣಿವೆಗಳಲ್ಲಿ ಭೂಸಾರ ಸಂರಕ್ಷಣೆ.

12. ಕಿರು ಅರಣ್ಯ ಉತ್ಪನ್ನ ಯೋಜನೆ.

13. ವಿಶೇಷ ಘಟಕ ಯೋಜನೆ.

14. ಗಿರಿಜನ ಉಪ ಯೋಜನೆ.

15. ಅರಣ್ಯ ಅಭಿವೃದ್ಧಿ ನಿಧಿ ಯೋಜನೆ.

16. ಪರಿಹಾರಾತ್ಮಕ ನೆಡುತೋಪು ಯೋಜನೆ.

17. ಜವಾಹರ್ ರೋಜ್‌ಗಾರ್ ಯೋಜನೆ.

18. ಬರಗಾಲ ಪೀಡಿತ ಪ್ರದೇಶಗಳ ಅಭಿವೃದ್ಧಿ ಕಾರ್ಯಕ್ರಮ.

19. ಸಮಗ್ರ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆ.

20. ಉದ್ಯೋಗ ಭರವಸೆ ಯೋಜನೆ.

21. ನೆಮ್ಮದಿ ಯೋಜನೆ.

ಆ) 1995-96ನೇ ಸಾಲಿನ ಅಂತ್ಯದಲ್ಲಿ ರಾಜ್ಯದಲ್ಲಿ ಒಟ್ಟು 38,28,428 ಹೆಕ್ಟೇರ್‌ನಷ್ಟು ಅರಣ್ಯ ಪ್ರದೇಶವಿತ್ತು. ಪ್ರಸಕ್ತ ಸಾಲಿನಲ್ಲಿ 58,876.5 ಹೆಕ್ಟೇರ್ ಪ್ರದೇಶದಲ್ಲಿ ವೃಕ್ಷ ನೆಡುತೋಪುಗಳನ್ನು ಬೆಳೆಸುವ ಗುರಿಯನ್ನು ಹೊಂದಲಾಗಿದೆ. ಈ ವಿಸ್ತೀರ್ಣವು ಕ್ಷೀಣಿತ ಪ್ರದೇಶಗಳ ಪುನರ್ವಸತಿ, ಸಾರ್ವಜನಿಕ ಜಮೀನಿನಲ್ಲಿ ಬೆಳೆಸುವ ನೆಡುತೋಪುಗಳು, ರಸ್ತೆಬದಿ, ನಗರ ಮತ್ತು ಪಟ್ಟಣಗಳಲ್ಲಿ ಬೆಳೆಸುವ ನೆಡುತೋಪುಗಳ ಪ್ರದೇಶವನ್ನೊಳಗೊಂಡಿರುತ್ತದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ಮಾನ್ಯ ಅಧ್ಯಕ್ಷರೇ ಸುಮಾರು 21 ಕಡೆ ಅರಣ್ಯ ಬೆಳೆಸತಕ್ಕಂಥ ಒಂದು ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಮತ್ತು ಎಷ್ಟು ಎಕರೆ ಎನ್ನುವುದನ್ನು ಸಹ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಅರಣ್ಯ ಬೆಳೆಸುವುದರಲ್ಲಿ ಎಷ್ಟು ಗಿಡ ನೆಡೆಸಿದ್ದೇವೆ ಎನ್ನುವಂತಹ ಒಂದು ಮಾಹಿತಿ ಇದೆ. ಎಷ್ಟು ಗಿಡಗಳು ಉಳಿದುಕೊಂಡಿವೆ ಎನ್ನುವ ಮಾಹಿತಿ ಇಲ್ಲ. ಅರಣ್ಯ ಬೆಳೆಸುವುದರಲ್ಲಿ ಜನರ

ಇನ್‌ವಾಲ್ವ್‌ಮೆಂಟ್ ಆಗಬೇಕು. ಇಲ್ಲದೇ ಇದ್ದರೆ ಸಾಮಾಜಿಕ ಅರಣ್ಯಕ್ಕೆ ಹೆಚ್ಚು ಒತ್ತು ಕೊಡುವುದು ಜೊತೆಗೆ ಒಂದು 500 ಎಕರೆ ಅರಣ್ಯ ಬೆಳೆಸತಕ್ಕಂಥ ಯೋಜನೆ ಸರ್ಕಾರಕ್ಕೆ ಇದ್ದರೆ, ಅದರಲ್ಲಿ ಒಂದು 50 ಜನ ಕೂಲಿಕಾರರನ್ನು ಅಥವಾ ರೈತರನ್ನು ಇನ್‌ವಾಲ್ವ್‌ಮೆಂಟ್ ಮಾಡಿದರೆ ಒಳ್ಳೆಯದು ಮತ್ತು ಅದರಿಂದ ಬರತಕ್ಕಂಥ ಉತ್ಪಾದನೆಯಲ್ಲಿ ಕೆಲವು ಅಂಶವನ್ನು ಅವರಿಗೂ ಕೊಡುವಂಥ ವ್ಯವಸ್ಥೆ ಮಾಡಿದರೆ ಒಳ್ಳೆಯದು. ಕರ್ನಾಟಕ ರಾಜ್ಯದಲ್ಲಿ ನಾವು ವಿದ್ಯುಚ್ಛಕ್ತಿಗೆ ಪರದಾಡುತ್ತಿದ್ದೇವೆ. ಈ ಅರಣ್ಯವನ್ನು ಬೆಳೆಸದೇ ಇರುವುದರಿಂದ, ಇವತ್ತು ಅರಣ್ಯ ಅರಣ್ಯರೋಧನವಾಗಿ ಕುಳಿತಿದೆ. ನಾನು ತಮ್ಮ ಮೂಲಕ ಸರ್ಕಾರಕ್ಕೆ ಹೇಳುವುದೇನೆಂದರೆ ಅರಣ್ಯ ಬೆಳೆಸುವ ಕಾರ್ಯಕ್ರಮದಲ್ಲಿ ಜನರ ಇನ್‌ವಾಲ್ವ್‌ಮೆಂಟ್ ಆದರೆ ಮಾತ್ರ ಸಾಧ್ಯ, ಅದು ಇಲ್ಲದೇ ಇದ್ದರೆ ಕೇವಲ ಸಸಿ ನೆಡತಕ್ಕಂಥ ಲೆಕ್ಕ ಮಾತ್ರ ಇದೆಯೇ ಹೊರತು ಗಿಡ ಆಗಿರತಕ್ಕಂಥ ಲೆಕ್ಕ ಬಹಳ ಕಡಿಮೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ನಾನೂ ಕೂಡ ರೈತ ಕುಟುಂಬದಿಂದ ಬಂದವನು. ಹೆಚ್ಚಿನ ಜನರನ್ನು ಇದರಲ್ಲಿ ಇನ್‌ವಾಲ್ವ್ ಮಾಡಿ ಜನರನ್ನು ಆಕರ್ಷಣೆ ಮಾಡಿ ಹೆಚ್ಚು ಅರಣ್ಯವನ್ನು ಬೆಳೆಸಬೇಕೆನ್ನುವ ಉದ್ದೇಶ ಸರ್ಕಾರಕ್ಕೆ ಇದೆ. ಎಷ್ಟು ಸಸಿಗಳು ಇದೆ ಅಂತ ಅವರು ಕೇಳಿದ್ದಾರೆ. ಕಳೆದ ಸಲ ಒಂದು ಸಮೀಕ್ಷೆ ಮಾಡಿದೆ. ಅದರ ವರದಿ ಪ್ರಕಾರ 80 ಪರ್ಸೆಂಟ್ ಅದರಲ್ಲಿ ಬಂದಿದೆ. ಇನ್ನು ಕೆಲವು ಕಡೆ 50 ಪರ್ಸೆಂಟ್ ಇದೆ ಇನ್ನು ಕೆಲವು ಕಡೆ 60 ಪರ್ಸೆಂಟ್ ಬಂದಿದೆ. ಮಾನ್ಯ ಸದಸ್ಯರು ಹೇಳಿದ ಪ್ರಕಾರ ಗಿಡಗಳನ್ನು ನೆಡುವುದು ಮುಖ್ಯವಲ್ಲ, ಆ ಗಿಡಗಳ ಸಂರಕ್ಷಣೆ ಆಗಬೇಕು. ಗಿಡಗಳನ್ನು ಚೆನ್ನಾಗಿ ನೋಡಿಕೊಳ್ಳಬೇಕು ನಾವು ಈಗ ರಸ್ತೆ ಬದಿಗಳಲ್ಲಿ ಗಿಡಗಳನ್ನು ಹಾಕುತ್ತಿದ್ದೇವೆ. ಸಮುದಾಯ ಭವನಗಳಲ್ಲಿ ಹಾಕುತ್ತಿದ್ದೇವೆ, ಶಾಲೆಗಳಲ್ಲಿ ಹಾಕುತ್ತಿದ್ದೇವೆ. ತಾವು ಹೇಳಿದ ಹಾಗೆ ಚೆನ್ನಾಗಿ ನೋಡಿಕೊಳ್ಳಬೇಕು. ಅದರಲ್ಲಿಯೂ ಸಹ ಖಾಸಗಿ ಶಾಲೆಗಳಲ್ಲಿ ಯಾರು ಗಿಡ ಬೆಳೆಸಿದ್ದಾರೆ ಅವರು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ. ಸರ್ಕಾರಿ ಶಾಲೆಗಳಲ್ಲಿ ನೆಟ್ಟ ಗಿಡಗಳು ಸರಿಯಾಗಿ ಆಗುತ್ತಿಲ್ಲ. ಅದನ್ನು ಸರಿ ಮಾಡುವಂತಹ ವ್ಯವಸ್ಥೆ ಮಾಡುತ್ತಿದ್ದೇವೆ ಇದರ ಜೊತೆಗೆ ಲೋಕಲ್ ಕಮಿಟಿಯವರನ್ನೂ ಸಹ ಇನ್‌ವಾಲ್ವ್ ಮಾಡುತ್ತಿದ್ದೇವೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ಮಾನ್ಯ ಅಧ್ಯಕ್ಷರೇ ಈಗ ಉದಾಹರಣೆಗೆ ಶಿವಮೊಗ್ಗ ಜಿಲ್ಲೆಯಲ್ಲಿ ಒಂದು 300 ಎಕರೆ ಏರಿಯಾ ಹೋದರೂ ಒಂದು ನೂರು ಗಿಡ ಇಲ್ಲ. ನೀವು ಸಾಮಾಜಿಕ ಅರಣ್ಯಕ್ಕೆ ಹೆಚ್ಚು ಒತ್ತು ಕೊಡದೇ ಇದ್ದರೆ ಸರ್ಕಾರದ ಮೂಲಕ ಅರಣ್ಯವನ್ನು ಸಂಪೂರ್ಣವಾಗಿ ಬೆಳೆಸುತ್ತೇವೆ ಅಂದ್ರೆ ಅದು ಸಾಧ್ಯವಾಗುವುದಿಲ್ಲ. ಜನರ ಇನ್‌ವಾಲ್ವ್‌ಮೆಂಟ್ ಮಾಡಬೇಕು. ಉದಾಹರಣೆಗೆ ಹಿಂದೆ ದೂಮ ಎನ್ನತಕ್ಕಂಥ ಮರಗಳು ಎಷ್ಟು ಇದ್ದವು. ಅವು ಇಲ್ಲದೇ ಇರುವುದರಿಂದ ನಾವು ಇವತ್ತು ಮಳೆ ಇಲ್ಲದೇ ಬಹಳ ತೊಂದರೆ ಪಡುತ್ತಿದ್ದೇವೆ. ದೂಮ ಎನ್ನತಕ್ಕಂಥ ಮರಗಳು ಕೊಡಗು ಜಿಲ್ಲೆಯಲ್ಲಿ ಮಡಿಕೇರಿಯಲ್ಲಿ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಬಹಳ ಇದ್ದವು. ಬಹಳ ದೊಡ್ಡದೊಡ್ಡ

ಮರಗಳು. ಆದರೆ ಇವತ್ತು ಅವುಗಳ ಸಂಖ್ಯೆಯೇ ಕಾಣುತ್ತಿಲ್ಲ. ಆ ಮಟ್ಟಕ್ಕೆ ಅರಣ್ಯ ನಷ್ಟವಾಗಿರುವುದರಿಂದ ಜನರನ್ನು ಇನ್‌ವಾಲ್ವ್‌ಮೆಂಟ್ ಮಾಡಬೇಕು. ಈಗ ಉದಾಹರಣೆಗೆ ನಾವು ಶಿವಮೊಗ್ಗ ಜಿಲ್ಲೆಯ ಎಲ್ಲಾ ಏರಿಯಾವನ್ನು ಬಳಸಿಕೊಂಡರೆ 300 ಎಕರೆಯಲ್ಲಿ ಒಂದು ನೂರು ಗಿಡ ಸಿಗುವುದಿಲ್ಲ. ಅದೇ ರೀತಿಯಲ್ಲಿ ಮಂಡ್ಯ ಜಿಲ್ಲೆಯನ್ನು ತೆಗೆದುಕೊಳ್ಳಿ. ನೂರು ಎಕರೆಯಲ್ಲಿ ಗಿಡಬೆಳೆಸಿದರೆ ಒಂದು 4 ಸಾವಿರ ಗಿಡ ಸಿಗುವುದಿಲ್ಲ. ಆದ್ದರಿಂದ ತಾವು ಪ್ರತಿ ಗ್ರಾಮಪಂಚಾಯಿತಿಯಲ್ಲಿಯೂ ಒಂದೊಂದು ಸಭೆ ಮಾಡಿ, ಹಳ್ಳಿಗೆ ಹೋಗಿ ಅರಣ್ಯ ಇಲಾಖೆಯವರು ಗಿಡಗಳನ್ನು ಹಂಚಿದರೆ ಮಾತ್ರ ಆಗ ಜನರನ್ನು ಇದರಲ್ಲಿ ಇನ್‌ವಾಲ್ವ್‌ಮೆಂಟ್ ಮಾಡುವುದಕ್ಕೆ ಸಾಧ್ಯ ಮತ್ತು ಮಳೆ ಬಂದ ತಕ್ಷಣ ಅರಣ್ಯ ಇಲಾಖೆಯವರು ಈ ಕಾರ್ಯಕ್ರಮವನ್ನು ಪ್ರತಿ ವರ್ಷ ರೂಪಿಸಬೇಕು, ಅರಣ್ಯ ಇಲಾಖೆಯ ಡಿ.ಎಫ್.ಒ.ಗಳು ಆ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಮತ್ತು ಜನ ಪ್ರತಿನಿಧಿಗಳನ್ನು ಆ ಕಾರ್ಯಕ್ರಮದಲ್ಲಿ ಇನ್‌ವಾಲ್ವ್‌ಮೆಂಟ್ ಮಾಡಿಸಬೇಕು ಜನರು ಮತ್ತು ಡಿಪಾರ್ಟ್‌ಮೆಂಟ್ ಇನ್‌ವಾಲ್ವ್ ಆದರೆ ಮಾತ್ರ ಅರಣ್ಯ ಉಳಿಯುತ್ತದೆ, ಇಲ್ಲದೇ ಇದ್ದರೆ ಕೇವಲ ಅಂಕಿ ಅಂಶಗಳಲ್ಲಿ ಮಾತ್ರ ಅರಣ್ಯ ಉಳಿದುಕೊಳ್ಳುತ್ತದೆ. ನಿಜವಾದ ಅರಣ್ಯ ಬೆಳೆಸುವುದಕ್ಕೆ ಸಾಧ್ಯವಿಲ್ಲ. ಈ ಬಗ್ಗೆ ತ್ವರಿತವಾಗಿ ಒಂದು ಕಾರ್ಯಕ್ರಮ ರೂಪಿಸಬೇಕು ಎನ್ನುವುದು ನನ್ನ ಸಲಹೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಮಾನ್ಯ ಅಧ್ಯಕ್ಷರೇ, ನಿಜ ನಾನು ಅದರ ಬಗ್ಗೆ ಮೊದಲು ಸಹ ಹೇಳಿದೆ. ಲೋಕಲ್ ಜನರನ್ನು ತೆಗೆದುಕೊಂಡು ಸಮಿತಿ ಮಾಡಿ ಮಾಡುತ್ತಿದ್ದೇವೆಂದು ಹೇಳಿದ್ದೇನೆ. ನಿಜ ಮೊದಲು ಕಾರವಾರ ಆ ಭಾಗದಲ್ಲಿ ಶೇಕಡ 80ರಷ್ಟು ಮರಗಳು ಇದ್ದವು ಅದು ಈಗ ಕಡಿಮೆ ಆಗಿದೆ. ಅರಣ್ಯ ಬೆಳೆಸಬೇಕು, ಆ ಬಗ್ಗೆ ನಾವು ಕಾರ್ಯಕ್ರಮ ರೂಪಿಸುತ್ತಿದ್ದೇವೆ ಇಲ್ಲ ಅಂತ ಇಲ್ಲ. ತಾವು ಸೀಡ್ಲಿಂಗ್ ಎಷ್ಟು ಮಾಡಿದ್ದೀರಿ ಎಂದು ಕೇಳಿದಿರಿ 10 ಕೋಟಿ ಸೀಡ್ಲಿಂಗ್ ಮಾಡಿದ್ದೇವೆ. ಮಾಡಿಲ್ಲ ಅಂತ ಇಲ್ಲ. ತಾವು ಹೇಳಿದ ಹಾಗೆ ಲೋಕಲ್ ಜನರನ್ನು ಇನ್‌ವಾಲ್ವ್ ಮಾಡಿದರೆ ಮಾತ್ರ ಅರಣ್ಯ ಉಳಿಯುತ್ತದೆ ಇಲ್ಲದಿದ್ದರೆ ಉಳಿಯುವುದಿಲ್ಲ. ಆ ನಿಟ್ಟಿನಲ್ಲಿ ಹೋಗತಕ್ಕಂಥ ವ್ಯವಸ್ಥೆ ಮಾಡುತ್ತೇನೆ.

ಶ್ರೀ ವೈ.ರಾಮಕೃಷ್ಣ:- ಮಾನ್ಯ ಅಧ್ಯಕ್ಷರೇ, ಸರ್ಕಾರ ಈ ಪಟ್ಟಿಯಲ್ಲಿ ಕೊಟ್ಟಿರುವಂತೆ 21 ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದೆ. 21 ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವುದಕ್ಕೆ ತಾವು ಎಷ್ಟು ಹಣವನ್ನು ಇಟ್ಟುಕೊಂಡಿದ್ದೀರಿ? ಐಟಂ ನಂಬರು 13 ಮತ್ತು 14 ವಿಶೇಷ ಘಟಕ ಯೋಜನೆ ಮತ್ತು ಹರಿಜನ ಗಿರಿಜನ ಕಲ್ಯಾಣ ಯೋಜನೆ ಈ ಎರಡು ಐಟಂಗಳಿಂದ ಎಷ್ಟು ಹಣವನ್ನು ಇಟ್ಟಿದ್ದೀರಿ. ಎಷ್ಟು ಜನರಿಗೆ ಇದರಿಂದ ಉಪಯೋಗವಾಗುತ್ತದೆ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ನಾನು ಉತ್ತರ ತರಿಸಿ ಕೊಡುತ್ತೇನೆ. ಅವರು

ಸಾಮಾನ್ಯವಾದ ಪ್ರಶ್ನೆ ಕೇಳಿದ್ದರು ನಾನು ಉತ್ತರ ಕೊಟ್ಟಿದ್ದೇನೆ.

ಅಧ್ಯಕ್ಷರು:- ಇದರಲ್ಲಿಯೇ ಬರುತ್ತದೆ, ತಾವು ಮಾಹಿತಿ ತರಿಸಿ ಇಟ್ಟುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ ಸರ್ಕಾರದವರು ಅರಣ್ಯ ಬೆಳವಣಿಗೆ ಬಗ್ಗೆ ಏನು ಕಾಳಜಿಯನ್ನು ವಹಿಸಿದ್ದೀರಿ, ತಾವು ಪ್ರತಿದಿನ ನೋಡಿರಬಹುದು ಜಾಹೀರಾತುಗಳು ಬರುತ್ತಿದೆ. ನಾವು ತೇಗದ ಮರ ಬೆಳೆಸುತ್ತಿದ್ದೇವೆ. ಇಂತಿಷ್ಟು ಹಣ ಕೊಡಬೇಕು ಅಂತ ಪ್ರತಿದಿನ ಜಾಹೀರಾತುಗಳು ನಾನಾ ಸಂಸ್ಥೆಗಳಿಂದ ಬರುತ್ತಿವೆ. ಅವರು ಹಣ ಮಾಡತಕ್ಕಂಥ ಪ್ರವೃತ್ತಿಯಲ್ಲಿ ತೊಡಗಿದ್ದಾರೆ. ಇದರಿಂದ ಜನ ಮೋಸ ಹೋಗುತ್ತಿದ್ದಾರೆಯೇ ಅಥವಾ ಏನು ನಡೆಯುತ್ತಿದೆ ಎನ್ನುವುದು ಗೊತ್ತಿಲ್ಲ. ಇದು ಏನಾದರೂ ಅರಣ್ಯ ಇಲಾಖೆಗೆ ಸಂಬಂಧಪಟ್ಟಿದೆಯೇ? ಅವರು ಅರಣ್ಯ ಇಲಾಖೆಯಿಂದ ಏನಾದರೂ ಅನುಮತಿ ಪಡೆದಿದ್ದಾರೆಯೇ? ಅವರು ತೇಗ ಬೆಳೆಸುತ್ತೇವೆ ಎಂದು ಹೇಳಿ ಜನರಿಂದ ದುಡ್ಡು ತೆಗೆದುಕೊಂಡು ಇಂತಿಷ್ಟು ವರ್ಷಗಳು ಆದರೆ ನಿಮಗೆ ಇಷ್ಟು ದುಡ್ಡುಬರುತ್ತದೆ ಅಂತ ಹೇಳಿ ಜನರ ಹತ್ತಿರ ಆಟ ಆಡುತ್ತಿದ್ದಾರೆ. ಈ ಬಗ್ಗೆ ಏನು ಹೇಳುತ್ತೀರಿ ಹೇಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಮಾನ್ಯ ಅಧ್ಯಕ್ಷರೇ, ಪ್ರೈವೇಟ್‌ನವರು ತೇಗದ ಮರಗಳನ್ನು ಬೆಳೆಸುತ್ತಿದ್ದರೆ, ಅವರು ನಮ್ಮ ಅನುಮತಿ ಏನೂ ಕೇಳಿಲ್ಲ. ನಾವು ಪ್ರೈವೇಟ್‌ನವರಿಗೂ ಕೂಡ ಸೀಡ್‌ಗಳನ್ನು ಕೊಡುತ್ತಿದ್ದೇವೆ ಸಸಿಗಳನ್ನು ಕೊಡುತ್ತಿದ್ದೇವೆ ಮರ ನೆಡಿ ಅಂತ ಹೇಳಿ. ತಾವು ಹೇಳಿದ ಹಾಗೆ ಪ್ರೈವೇಟ್‌ನವರು ಜನರಿಂದ ದುಡ್ಡು ತೆಗೆದುಕೊಂಡು ಮಾಡುತ್ತಿದ್ದರೆ ಅವರು ನಮ್ಮ ಕಡೆಯಿಂದ ಅನುಮತಿ ತೆಗೆದುಕೊಂಡಿಲ್ಲ. ಅಂಥಾದ್ದು ಏನಾದರೂ ಇದ್ದರೆ ಅದನ್ನು ತಾವು ನನ್ನ ಗಮನಕ್ಕೆ ತಂದರೆ ನಾನು ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ವಿಷಯ:- ಪ್ರಾಥಮಿಕ ಶಾಲಾ ಕಟ್ಟಡಗಳ ನಿರ್ಮಾಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 125 (841)

ಶ್ರೀ ಎನ್.ಯೋಗೀಶ್ ಭಟ್ (ಮಂಗಳೂರು):- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96ನೇ ಸಾಲಿನಲ್ಲಿ ಎಷ್ಟು ಪ್ರಾಥಮಿಕ ಶಾಲಾ ಕಟ್ಟಡಗಳನ್ನು ಕಟ್ಟಲು ಸರ್ಕಾರವು ಉದ್ದೇಶಿಸಿತು?

ಆ) ಹಾಗಿದ್ದಲ್ಲಿ ಕಟ್ಟಿರುವ ಕಟ್ಟಡಗಳ ಸಂಖ್ಯೆ ಎಷ್ಟು ಹಾಗೂ ಉಳಿದ ಕಟ್ಟಡಗಳನ್ನು ಯಾವಾಗ ಪೂರೈಸಲಾಗುವುದು?

ಇ) ಹಾಗಿದ್ದಲ್ಲಿ ಇದೇ ರೀತಿ 96-97ನೇ ಸಾಲಿನಲ್ಲಿ ಉದ್ದೇಶಿಸಿ ಕಟ್ಟಲ್ಪಟ್ಟ ಇನ್ನು ಬಾಕಿಯಿರುವ ಕಟ್ಟಡಗಳು.